ಅ) 1) ಮಳು ಸಾಕಣೆ ಕೊಠಡಿಗಳಲ್ಲಿ ನೈಲಾನ್ ಬಲೆ ಉಪಯೋಗಿಸುವುದು.
2) ಮಳು ಸಾಕುವ ತಟ್ಟೆಗಳನ್ನು ನೈಲಾನ್ ಬಲೆಗಳಿಂದ ಮುಚ್ಚುವುದು.
3) ಮಳು ಸಾಕಣೆ ಮನೆಯ ಕಿಟಕಿ ಬಾಗಿಲುಗಳಿಗೆ ತಂತಿ ಜಾಲರಿ ಅಳವಡಿಸುವುದು.
4) ಊಜಿ ನೊಣದ ಮೆಗಾಟ್ಟಗಳು ಇರತಕ್ಕಂತಹ ಮಳುಗಳನ್ನು ಆಯ್ದು ಸಾಯಿಸುವುದು.
5) ಊಜಿ ಸೈಡ್ ದ್ರಾವಣವನ್ನು ಹುಳುಗಳ ಮೇಲೆ ಸಿಂಪಡಿಸುವುದು.
6) ರೇಷ್ಮೆ ಗೂಡಿನ ಮಾರುಕಟ್ಟೆಗಳಲ್ಲಿ ಊಜಿ ನೊಣದ ಮೆಗ್ಗಾಟ್‌ಗಳನ್ನು ಸಂಗ್ರಹಿಸಿ ಬಿಸಿ ನೀರಿನಲ್ಲಿ ಸಾಯಿಸುವುದು.

ವಿಷಯ :– ಕರ್ನಾಟಕ ರಾಜ್ಯ ಹಣಕಾಸು ನಿಗಮ ಮಂಡಳಿಯಿಂದ ಸಾಲ ಮಂಜೂರಾತಿ ಪಡೆದ ಅರ್ಜಿದಾರರ ಸಂಖ್ಯೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 492 (1104)

ಶ್ರೀ ಹೆಚ್. ಎಂ. ರೇವಣ್ಣ (ಮಾಗಡಿ) :– ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮಾಗಡಿ ತಾಲ್ಲೂಕಿನಲ್ಲಿ ಕಳೆದ ಮೂರು ವರ್ಷಗಳಿಂದ ಕರ್ನಾಟಕ ರಾಜ್ಯ ಹಣಕಾಸು ನಿಗಮ ಮಂಡಳಿಯಿಂದ ಸಾಲ ಮಂಜೂರಾದ ಅರ್ಜಿದಾರರ ಸಂಖ್ಯೆ ಎಷ್ಟು ? ಹಾಗೂ ಮಂಜೂರು ಆಗದೇ ಇರುವ ಅರ್ಜಿದಾರರ ಸಂಖ್ಯೆ ಎಷ್ಟು ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :–

ಅ) ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯು ಮಾಗಡಿ ತಾಲ್ಲೂಕಿನಲ್ಲಿ ಕಳೆದ 3 ವರ್ಷಗಳಲ್ಲಿ ಕೊಟ್ಟಿರುವ ಸಾಲ ಸೌಲಭ್ಯದ ವಿವರ ಈ ಕೆಳಗಿನಂತಿದೆ :

(ಮೊತ್ತ : ಲಕ್ಷ ರೂ. ಗಳಲ್ಲಿ)

ವರ್ಷ	ಮಂಜೂರಾತಿ ಸಂಖ್ಯೆ	ಮೊತ್ತ
1988–89	1	0.62
1989–90	25	18.54
1990–91 (30–11–1990ರ ವರೆಗೆ)	28	33.11

30–11–1990 ರಲ್ಲಿ ಮಂಜೂರಾತಿಗಾಗಿ ಕಾದಿರುವ ಅರ್ಜಿದಾರರ ಸಂಖ್ಯೆ 6 ಇದ್ದು, ಒಟ್ಟು ಸಾಲ ಅಪೇಕ್ಷಿಸಿರುವ ಮೊತ್ತ 3.55 ಲಕ್ಷ ರೂ.ಗಳು.

ವಿಷಯ :– ವಿಜಯನಗರ ಉಕ್ಕಿನ ಕಾರ್ಖಾನೆ ಪ್ರಾರಂಭಿಸುವ ಕುರಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 493 (681)

ಶ್ರೀ ಶಿವಾನಂದ ಪೆಚ್. ಕೌಜಲಗಿ (ಬೈಲಹೊಂಗಲ) :– ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ವಿಜಯನಗರ ಉಕ್ಕಿನ ಕಾರ್ಖಾನೆ ಯೋಜನೆಯನ್ನು ತೀವ್ರಗತಿಯಿಂದ ಪ್ರಾರಂಭಿಸಲು ರಾಜ್ಯ ಸರ್ಕಾರದವರು ಕೈಗೊಂಡಿರುವ ಕ್ರಮವೇನು ?

ಆ) ಈ ವಿಜಯನಗರ ಉಕ್ಕಿನ ಕಾರ್ಖಾನೆ ಪ್ರಾರಂಭಿಸಲು ಅಡಿಗಲ್ಲನ್ನು ಯಾರು ಯಾವ ವರ್ಷದಲ್ಲಿ ಹಾಕಿದರು ?

ಇ) ಅಡಿಗಲ್ಲನ್ನು ಹಾಕುವ ಕಾಲಕ್ಕೆ ಅಡಳಿತಾತ್ಮಕ ಮಂಜೂರಾತಿಯನ್ನು ಈ ಕೆಲಸಕ್ಕೆ ನೀಡಲಾಗಿತ್ತೆ?